ಈಗಲೇ ಹೇಳಬೇಕು" ಎಂದುಕೊಳ್ಳುತ್ತಿದ್ದಂತೆ ಆಣೆಕಲ್ಲು ಮಳೆ ಕೂಡ ಬಂದೇ ಬಿಟ್ಟಿತು. ಪ್ರತಿದಿನ ಮೂರು ತಾಸುಗಳ ಕಾಲ ಚಟಪಟನೆ ಸುರಿಯುತ್ತ ಅರಮನೆಯ ಹೆಂಚುಗಳನ್ನೆಲ್ಲ ಒಡೆದು ಹಾಕಿತು. ಅತ್ಯಂತ ರಭಸದಿಂದ ಆ ಹೂದೋಟದ ತುಂಬೆಲ್ಲ ಓಡಾಡಿತು. ಬೂದು ಬಣ್ಣದ ಉಡುಪು ಧರಿಸಿದ್ದ ಆ ಆಣೆಕಲ್ಲು ಮಳೆಯ ಉಸಿರು ಹಿಮದಂತೆ ತಣ್ಣಗಿತ್ತು.

ಆ ಸ್ವಾರ್ಥಿ ರಾಕ್ಷಸ ಕಿಟಕಿಯ ಬಳಿ ಕುಳಿತು ಹಿಮಹೊದ್ದುಕೊಂಡ ತನ್ನ ಹೂದೋಟದ ತುಂಬಾ ಕಣ್ಣಾಡಿಸಿದ. "ವಸಂತ ಋತು ಬರಲು ಇಷ್ಟೇಕೆ ತಡಮಾಡಿದೆ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. ಇಷ್ಟರಲ್ಲೇ ವಾತಾವರಣ ಬದಲಾಗಬಹುದು" ಎಂದುಕೊಂಡ.

ಆದರೆ ವಸಂತ ಋತು ಬರಲೇ ಇಲ್ಲ. ಶರದೃತು ಎಲ್ಲ ತೋಟಗಳಿಗೆ ಬಂಗಾರವರ್ಣದ ಹಣ್ಣುಗಳನ್ನು ನೀಡಿತು. ಆದರೆ ಆ ಸ್ವಾರ್ಥಿ ರಾಕ್ಷಸನ ಹೂದೋಟದ ಮರಗಳಿಗೆ ಅದು ಒಂದೇ ಒಂದು ಹಣ್ಣು ಕೂಡ ಕೊಡಲಿಲ್ಲ. "ಆತ ತುಂಬ ಸ್ವಾರ್ಥಿಯಾಗಿದ್ದಾನೆ" ಎಂದಿತು ಶರದೃತು. ಹೀಗಾಗಿ, ಆ ಹೂದೋಟದಲ್ಲಿ ಬರೀ ಚಳಿಗಾಲ, ಬಡಗಣಗಾಳಿ, ಆಣೆಕಲ್ಲು ಮಳೆ, ಹಿಮ ಹಾಗೂ ಮಂಜುಗಡ್ಡೆಗಳು ಅಲ್ಲಿರುವ ಮರಗಳ ನಡುವೆ ಕುಣಿದು ಕುಪ್ಪಳಿಸಿದವು.

ಒಂದು ಮುಂಜಾನೆ ಆ ರಾಕ್ಷಸ ತನ್ನ ಹಾಸಿಗೆಯ ಮೇಲೆ ಕಣ್ಣು ತೆರೆದುಕೊಂಡೇ ಒರಗಿದ್ದ. ಆಗ ಎಲ್ಲಿಂದಲೋ ಆತನಿಗೆ ಮಧುರವಾದ ಸಂಗೀತ ಕೇಳಿ ಬಂತು. ಆ ಸಂಗೀತ ಅದೆಷ್ಟು ಸುಮಧುರವಾಗಿತ್ತೆಂದರೆ, ರಾಜನ ಆಸ್ಥಾನದ ಸಂಗೀತಗಾರರು ಅಲ್ಲಿ ಹಾದು ಹೋಗುತ್ತಿದ್ದಾರೆನಿಸಿತು. ನಿಜಕ್ಕೂ ತನ್ನ ಕಿಟಕಿಯ ಆಚೆ ಒಂದು ಪುಟ್ಟ ಲಿನೆಟ್ ಹಕ್ಕಿ ಹಾಡುತ್ತಿರಬೇಕು. ಎಷ್ಟೋ ಕಾಲದ ನಂತರ ಆತನ ಹೂದೋಟದಲ್ಲಿ ಅಂಥ ಹಾಡು ಕೇಳಿ ಬಂದದ್ದರಿಂದ, ಅದು ವಿಶ್ವದ ಅತ್ಯಂತ ಮಧುರವಾದ ಸಂಗೀತ ಎಂದೆನಿಸಿತು ಆತನಿಗೆ. ಅನಂತರ ತನ್ನ ಅರಮನೆಯ ಮೇಲೆ ಚಟಪಟನೆ ಕುಣಿಯುತ್ತಿದ್ದ ಆಣೆಕಲ್ಲು ಮಳೆ ನಿಂತಿತು. ಬಡಗಣ ಗಾಳಿಯ ಅಬ್ಬರವೂ ನಿಂತಿತು. ಅರಮನೆಯ ಮುಂದಿನ ತೆರೆದ ಕಿಟಕಿಯಿಂದ ಮಧುರ ಸುಗಂಧ ಅವನತ್ತ ತೇಲಿ ಬಂತು. "ನನ್ನ ನಂಬಿಕೆಯಂತೆ ಕೊನೆಗೂ ವಸಂತ ಋತು ಬಂತಲ್ಲ" ಎಂದುಕೊಂಡು ಆ ರಾಕ್ಷಸ ಹಾಸಿಗೆಯಿಂದ ಜಿಗಿದೆದ್ದು ಹೊರಗೆ ಬಂದು ನೋಡಿದ.

ಅಲ್ಲಿ ಆತ ಕಂಡದ್ದೇನು?

ಅತ್ಯಂತ ಅಚ್ಚರಿಯ ದೃಶ್ಯ ಅಲ್ಲಿ ಕಾದಿತ್ತು. ಆ ಗೋಡೆಯ ಒಂದು ಪುಟ್ಟ ಕಿಂಡಿಯ ಮೂಲಕ ಮಕ್ಕಳು ಹೂದೋಟದೊಳಗೆ ನುಗ್ಗಿದ್ದರು. ಅವರು ಅಲ್ಲಿರುವ ಮರಗಳ ಟೊಂಗೆಗಳ ಮೇಲೆ ಕುಳಿತಿದ್ದರು. ಅಲ್ಲಿದ್ದ ಪ್ರತಿಯೊಂದು ಮರದ ಮೇಲೆ ಒಬ್ಬ ಬಾಲಕ ಕುಳಿತಿರುವುದನ್ನು ಆತ ಕಂಡ. ಮಕ್ಕಳು ಮರಳಿ ಬಂದದ್ದರಿಂದ ಎಲ್ಲ ಮರಗಳೂ ಹರ್ಷಚಿತ್ತವಾಗಿದ್ದವು. ಅವು ಮೈತುಂಬ ಹೂ ಅರಳಿಸಿಕೊಂಡಿದ್ದವು. ಮರಗಳು ಕೈ ಬೀಸಿ ಮಕ್ಕಳ ತಲೆಗಳನ್ನು ನೇವರಿಸುತ್ತಿದ್ದವು. ಹಸಿರು ಹುಲ್ಲಿನ ನಡುವೆ ಮುಖವನ್ನು ಮೇಲೆತ್ತಿ ಹೂಗಳು ನಗುತ್ತಿದ್ದವು. ಅದೊಂದು ಸುಂದರ ದೃಶ್ಯವಾಗಿತ್ತು. ಆ ಹೂದೋಟದ ಒಂದು ಮೂಲೆಯಲ್ಲಿ ಮಾತ್ರ ಇನ್ನೂ ಚಳಿಗಾಲವಿತ್ತು. ಅತ್ಯಂತ ದೂರದಲ್ಲಿದ್ದ ಆ ಮೂಲೆಯಲ್ಲಿ ಓರ್ವ ಪುಟ್ಟ ಬಾಲಕ ನಿಂತಿದ್ದ. ಅಲ್ಲಿದ್ದ ಮರದ ಟೊಂಗೆಗಳು ನಿಲುಕದಷ್ಟು ಪುಟ್ಟ ಬಾಲಕ ಅವನಾಗಿದ್ದ. ಕಹಿಮೋರೆ ಮಾಡಿಕೊಂಡು ರೋದಿಸುತ್ತ ಆ ಮರದ ಸುತ್ತ ಸುಳಿದಾಡುತ್ತಿದ್ದ. ಆ ಬಡಪಾಯಿ ಮರ ಇನ್ನೂ ಹಿಮಾಚ್ಛಾದಿತವಾಗಿತ್ತು. ಅಲ್ಲದೆ ಬಡಗಣ ಗಾಳಿ ಅದರ ಮೇಲೆ ಇನ್ನೂ ಅಬ್ಬರಿಸುತ್ತಿತ್ತು.

"ಅಯ್ಯಾ ಬಾಲಕಾ, ಹತ್ತು ಮೇಲೆ" ಎಂದು ಹೇಳುತ್ತ ಆ ಮರ ತನ್ನ ಟೊಂಗೆಗಳನ್ನು ಇನ್ನಷ್ಟು